**ಇಂದು ದಿನಾಂಕ: 02.04.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. ವಕೀಲರಿಂದಃ**

ನಾನು 9 ನೇ ತರಗತಿ ಅನುತ್ತೀರ್ಣಳಾಗಿದ್ದೇನೆ. ಕನ್ನಡ ಮಾತ್ರ ಓದಲು ಗೊತ್ತಿದೆ. ಸಾಕ್ಷಿಗೆ ಒಂದು ಪ್ರಶಸ್ತಿ ಪತ್ರದ ಜೆರಾಕ್ಸ ಪ್ರತಿಯನ್ನು ತೋರಿಸಿ ಸದರಿ ಪ್ರಶಸ್ತಿ ಪತ್ರವನ್ನು 1984 ರಲ್ಲಿ ನನಗೆ ನೀಡಿದ್ದಾರೆ ಎಂದು ಒಪ್ಪಿಕೊಂಡಿರುತ್ತಾರೆ. ಸದರಿ ಪತ್ರ ಜೆರಾಕ್ಸ್ ಪ್ರತಿಯಾಗಿರುವುದರಿಂದ ನಿಶಾನೆಯಾಗಿ ಗುರುತಿಸಲು ಬರುವುದಿಲ್ಲವೆಂದು ವಾದಿ ಪರ ವಕೀಲರು ತಕರಾರು ನೀಡಿರುತ್ತಾರೆ. ಸದರಿ ತಕರಾರಿಗೆ ಒಳಪಟ್ಟು ಪ್ರಶಸ್ತಿ ಪತ್ರವನ್ನು **ನಿ.ಡಿ–1** ಎಂದು ಗುರುತಿಸಲಾಯಿತು. ನನ್ನ ತಂದೆ ನಿಂಗಪ್ಪ ಮತ್ತು 3 ನೇ ಪ್ರತಿವಾದಿ ಈ ದಿನ ನ್ಯಾಯಾಲಯಕ್ಕೆ ಬಂದಿದ್ದಾರೆ ಎಂಬುದು ಸರಿ. 4 ನೇ ಪ್ರತಿವಾದಿ 10 ನೇ ತರಗತಿ ಅನುತ್ತೀರ್ಣರಾಗಿದ್ದಾರೆ. 5 ನೇ ಪ್ರತಿವಾದಿ ಪಿಯುಸಿ ಓದಿದ್ದಾರೆ. 6 ನೇ ಪ್ರತಿವಾದಿ ಬಿಎ ಓದಿದ್ದಾರೆ.

ನನ್ನ ಮದುವೆ ಪಿರಿಯಾಪಟ್ಟಣದಲ್ಲಿ ಆಗಿದೆ ಎಂದರೆ ಸರಿ. ನನ್ನ ಯಜಮಾನರು ಪಿರಿಯಾಪಟ್ಟಣದವರು. ನನ್ನ ಯಜಮಾನರು ಬೆಂಗಳೂರು ಬಿಇಎಂಎಲ್ ಕಾರ್ಖಾನೆಯಲ್ಲಿ ಸೀನಿಯರ್ ಮ್ಯಾನೇಜರ್ ಆಗಿ ನಿವೃತ್ತಿಯಾಗಿದ್ದಾರೆ ಎಂದರೆ ಸರಿ. 3 ನೇ ಪ್ರತಿವಾದಿ ಬೆಂಗಳೂರಿನಲ್ಲಿ ಕಾಂಟ್ರಾಕ್ಟರ್ ಆಗಿ ಕೆಲಸ ಮಾಡಿಕೊಂಡು ಇದ್ದಾರೆ ಎಂದರೆ ಸರಿ. 3 ನೇ ಪ್ರತಿವಾದಿ ಜಮೀನು ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ ನಮ್ಮ ತಂದೆ ನೋಡಿಕೊಳ್ಳುತ್ತಿದ್ದಾರೆ. 4 ನೇ ಪ್ರತಿವಾದಿಯ ಗಂಡ ಶಿಕ್ಷಣ ಇಲಾಖೆಯಲ್ಲಿ ನೌಕರರಾಗಿದ್ದು, ನಿವೃತ್ತಿ ಹೊಂದಿದ್ದಾರೆ ಎಂದರೆ ಸರಿ. 5 ನೇ ಪ್ರತಿವಾದಿಯ ಗಂಡ ಹೆಚ್.ಎಂ.ಟಿ. ಕಂಪನಿಯ ನೌಕರರಾಗಿದ್ದು ನಿವೃತ್ತಿಯಾಗಿದ್ದಾರೆ ಎಂದರೆ

ಸರಿ. 6 ನೇ ಪ್ರತಿವಾದಿಯ ಗಂಡ pharmaceutical ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ ಅವರು ಯಾವುದೇ ವ್ಯಾಪಾರ ಮಾಡುತ್ತಿರಲಿಲ್ಲ.

4 ಮತ್ತು 6 ನೇ ಪ್ರತಿವಾದಿಗಳ ಮದುವೆಯನ್ನು ನಮ್ಮ ತಂದೆ ಬೆಂಗಳೂರಿನಲ್ಲಿ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. 5 ನೇ ಪ್ರತಿವಾದಿ ಮದುವೆಯನ್ನು ನಮ್ಮ ತಂದೆ ಮೈಸೂರಿನಲ್ಲಿ ಮಾಡಿಕೊಟ್ಟಿದ್ದಾರೆ. ನನ್ನ ತಂದೆ ಸರ್ಕಾರಿ ನೌಕರಿಯಲ್ಲಿದ್ದರು ಎಂದರೆ ಸರಿ. ನನ್ನ ತಂದೆ ಯಾವಾಗ ನಿವೃತ್ತಿ ಹೊಂದಿದ್ದಾರೆ ನೆನಪಿಲ್ಲ. 4 ಮತ್ತು 5 ನೇ ಪ್ರತಿವಾದಿಗಳ ಮದುವೆಯ ಸಮಯದಲ್ಲಿ ನನ್ನ ತಂದೆ ಒಂದೊಂದು ಬಜಾಜ್ ಸ್ಕೂಟರ್ ಕೊಡಿಸಿದ್ದಾರೆ ಎಂದರೆ ಸರಿ. 6 ನೇ ಪ್ರತಿವಾದಿಯ ಮದುವೆಯ ಸಮಯದಲ್ಲಿ ಅವರ ಗಂಡನಿಗೂ ನನ್ನ ತಂದೆ ಒಂದು ಹಿರೋ ಹೋಂಡಾ ಮೋಟಾರ್ ಸೈಕಲ್ ಕೊಡಿಸಿದ್ದರು ಎಂದರೆ ಸರಿ. ನನ್ನ ಗಂಡ ಮದುವೆಯ ಸಮಯದಲ್ಲಿ ಯಾವುದೇ ವಾಹನ ಬೇಡ ಹಣ ಕೊಡಿ ಎಂದು ಪಡೆದುಕೊಂಡಿದ್ದಾರೆ ಎಂಬುದು ಸರಿ.

ನನ್ನ ಯಜಮಾನರು ಮೊದಲು ಸರ್ಕಾರಿ ಟೂಲ್ ರೂಲ್ ನಲ್ಲಿ ನೌಕರಾಗಿದ್ದರು ನಂತರ ಬೆಮೆಲ್ ನಲ್ಲಿ ನೌಕರರಾಗಿದ್ದು ನಿವೃತ್ತರಾಗಿದ್ದಾರೆ. ನಮ್ಮಗಳ ಮದುವೆಯ ಸಮಯದಲ್ಲಿ ನಮ್ಮ ತಂದೆ ಸಂಪ್ರದಾಯದ ಪ್ರಕಾರ ಎಲ್ಲರಿಗೂ ಚಿನ್ನ ಮತ್ತು ಒಡವೆ ಕೊಟ್ಟಿದ್ದಾರೆ ಎಂದರೆ ಅಷ್ಟೊಂದು ಕೊಟ್ಟಿಲ್ಲ. ವಾದ ಪತ್ರದಲ್ಲಿರುವ ವಿಷಯ ಹಾಗೂ ಪ್ರತಿವಾದಿಗಳು ಸಲ್ಲಿಸಿರುವ ಲಿಖಿತ ಹೇಳಿಕೆಗಳಲ್ಲಿರುವ ವಿಷಯಗಳನ್ನು ತಿಳಿದುಕೊಂಡಿದ್ದೇನೆ. 5 ನೇ ಪ್ರತಿವಾದಿ ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿರುವ ವಿಷಯಗಳನ್ನು ತಿಳಿದುಕೊಂಡಿದ್ದೇನೆ.

ಸಿದ್ದೇಗೌಡ ನನ್ನ ತಾತ. ಅವರ ಪತ್ನಿಯ ಹೆಸರು ಚೆನ್ನಮ್ಮ. ನನ್ನ ತಾತ ತೀರಿಕೊಂಡಿರುವುದು ನನಗೆ ನೆನಪಿಲ್ಲ. ನನ್ನ ಅಜ್ಜಿ 20 ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ. ನನ್ನ ಅಜ್ಜಿ ತಾತನಿಗೆ 3 ಜನ

ಮಕ್ಕಳು ಅವರ ಪೈಕಿ ನನ್ನ ತಂದೆ ನಿಂಗಪ್ಪ ಒಬ್ಬರೇ ಗಂಡು ಮಗ. ದಾವಾ ಆಸ್ತಿಗಳು ನನ್ನ ತಾತ ಸಿದ್ದೇಗೌಡರಿಗೆ ಬಂದಿತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಕೊಟ್ಟಿದ್ದೇನೆ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಪಹಣಿಗಳಲ್ಲಿ ದಾವಾ ಆಸ್ತಿಗಳು ನನ್ನ ತಾತನ ಆಸ್ತಿಗಳು ಎಂದು ಬರೆದಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 1 ರಿಂದ 13 ರ ಆಸ್ತಿಗಳು ನನ್ನ ತಾತನಿಗೆ ಸೇರಿತ್ತು ಎಂದು ತೋರಿಸಲು ದಾಖಲೆಗಳು ಇವೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ ಎಂದರೆ ಸರಿ.

ನಿ.ಪಿ–2 ರಲ್ಲಿರುವ ವಿಷಯಗಳನ್ನು ನಾನು ತಿಳಿದುಕೊಂಡಿಲ್ಲ, ಸಾಕ್ಷಿಯು ಸ್ವತಃ ಹೇಳುವುದೆಂದರೆ ನನಗೆ ಓದಲು ಅದನ್ನು ಕೊಟ್ಟಿರುವುದಿಲ್ಲ. ಕೇಸು ಹಾಕುವ ಮೊದಲು ಸಹ ನಿ.ಪಿ–2 ನ್ನು ಓದಿ ತಿಳಿದುಕೊಂಡಿಲ್ಲ. ಓದಿ ತಿಳಿದುಕೊಳ್ಳಲು ತೊಂದರೆ ಇರುವುದಿಲ್ಲ ಎಂದರೆ ಸರಿ. ನಮ್ಮ ತಂದೆ ಮನೆಯಲ್ಲಿ ಹುಟ್ಟಿ ಬೆಳೆದಿದ್ದ ಕಾರಣ ದಾವಾ ಆಸ್ತಿಗಳು ನಮ್ಮ ತಾತನ ಆಸ್ತಿಗಳು ಎಂದು ಗೊತ್ತಿತ್ತು.

ದಿನಾಂಕ 28.12.2014 ರಂದೆ ನಾನು ನಮ್ಮ ತಂದೆ ತಾಯಿ ಮನೆಗೆ ಹೋಗಿ ನೆಲೆಸಿದ್ದೆ ಎಂದರೆ ನೆನಪಿಲ್ಲ. ಆ ರೀತಿಯಾಗಿ ದಾಖಲೆಯನ್ನು ತಯಾರಿಸಬೇಕೆಂದು 6 ನೇ ಪ್ರತಿವಾದಿ ನನಗೆ ಹೇಳಿದ್ದರು ಎಂದರೆ ಸುಳ್ಳು. ದಿನಾಂಕ 28.12.2014 ರಂದು ನನ್ನ ಜೊತೆ ನನ್ನ ಯಜಮಾನರೂ ಸಹ ಪ್ರತಿವಾದಿ 1 ಮತ್ತು 2 ರವರ ಮನೆಯಲ್ಲಿದ್ದರು ಎಂದರೆ ಸುಳ್ಳು. ನನ್ನ ಮತ್ತು 6 ನೇ ಪ್ರತಿವಾದಿಯ ಹೇಳಿಕೆಯ ಮೇರೆಗೆ ನಿ.ಪಿ–2 ರ ದಾಖಲೆ ತಯಾರಾಗಿದೆ ಎಂದರೆ ಸುಳ್ಳು. ನನ್ನ ಯಜಮಾನರು ಆಗಿದ್ದಾಂಗೆ ನನ್ನ ತಂದೆ ತಾಯಿ ಮನೆಗೆ ಹೋಗುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಯಜಮಾನರ ಕುಟುಂಬಕ್ಕೆ ಪಿರಿಯಾಪಟ್ಟಣ ತಾಲ್ಲೂಕು ಹರಿಲಾಪುರ ಗ್ರಾಮದಲ್ಲಿ ಆಸ್ತಿಗಳು ಇತ್ತು

ಎಂಬುದು ಸರಿ. ನನ್ನ ಯಜಮಾನರ ತಂಗಿ ಆಸ್ತಿ ವಿಭಾಗಕ್ಕಾಗಿ ಕೇಸು ಹಾಕಿದ್ದರು ಎಂದರೆ ಸರಿ ಆ ಕೇಸಿನ ವಿಚಾರವಾಗಿ ನನ್ನ ಯಜಮಾನರು ನನ್ನ ತಂದೆ ತಾಯಿ ಮನೆಗೆ ಬಂದು 4-5 ದಿವಸ ಬಂದು ಉಳಿದುಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

ನನ್ನ ಯಜಮಾನರ ತಂಗಿ ಆಸ್ತಿ ವಿಭಾಗಕ್ಕಾಗಿ ಅಸಲು ದಾವಾ ನಂಬರ್ 153/2015 ರಲ್ಲಿ ಸಲ್ಲಿಸಿದ್ದ ದಾವೆ ಡಿಕ್ರಿಯಾಗಿತ್ತು ಎಂದರೆ ಸರಿ. ಜಮೀನಿನ ವಿಭಾಗದ ಸಂಬಂಧವಾಗಿ ನನ್ನ ಯಜಮಾನರಿಗೆ ತುಂಬಾ ಕಾನೂನು ತಿಳುವಳಿಕೆ ಇತ್ತು ಎಂದರೆ ಅಷ್ಟೊಂದು ತಿಳುವಳಿಕೆ ಇರಲಿಲ್ಲ. ಆ ರೀತಿ ನನ್ನ ಯಜಮಾನರು ತಿಳುವಳಿಕೆ ಹೊಂದಿದ್ದ ಕಾರಣ ವಿಭಾಗ ಪತ್ರ ಮಾಡಿಕೊಳ್ಳೋಣ ಎಂಬ ಕಾರಣ ಪ್ರತಿವಾದಿ 6 ಮತ್ತು ನನ್ನ ಪತಿಗೆ ತಿಳುವಳಿಕೆ ಹೇಳಿದ್ದರಿಂದ ನಿ.ಪಿ-2 ರ ವಿಭಾಗ ಪತ್ರ ಆಯಿತು ಎಂದರೆ ಸರಿಯಲ್ಲ. ನಿ.ಪಿ-2 ರ ವಿಭಾಗ ಪತ್ರವನ್ನು ನಾನು, ನನ್ನ ಸಹೋದರಿಯರು, ಪ್ರತಿವಾದಿ 1 ರಿಂದ 3 ರವರೆಲ್ಲರೂ ಓದಿ ತಿಳಿದುಕೊಂಡು ನಂತರ ಉಪನೊಂದಣಾಧಿಕಾರಿ ಕಚೇರಿಗೆ ಹೋಗಿದ್ದೇವೆ ಎಂದರೆ ಸುಳ್ಳು.

ನಿ.ಪಿ-2 ರ ದಾಖಲೆಯಲ್ಲಿ ನನ್ನ ಫೋಟೊ ಇದೆ ಎಂದರೆ ಸರಿ ಆದರೆ ಭೋಗ್ಯ ತಿರುವಳಿ ಪತ್ರ ಮಾಡಬೇಕೆಂದು ನನ್ನನ್ನು ಕರೆದುಕೊಂಡು ಹೋಗಿ ಸಹಿ ಮಾಡಿಸಿಕೊಂಡಿದ್ದಾರೆ. ದಾವಾ ಆಸ್ತಿಗಳ ಪೈಕಿ ಯಾವುದಾದರೂ ಆಸ್ತಿಗಳನ್ನು ಭೋಗ್ಯ ಮಾಡಿದ್ದಾರೆಯೇ ಎಂದರೆ ನನಗೆ ಗೊತ್ತಿಲ್ಲ. 3 ನೇ ವ್ಯಕ್ತಿಗೆ ಭೋಗ್ಯ ಮಾಡಿತ್ತು ಎಂದು ಹೇಳಲಾದ ವ್ಯಕ್ತಿಯ ಹೆಸರು ನನಗೆ ಗೊತ್ತಿಲ್ಲ. ದಾವಾ ಹಾಕಿದ ನಂತರವೂ ಸಹ ಯಾರಿಗಾದರೂ ಭೋಗ್ಯ ಮಾಡಲಾಗಿತ್ತೆ ಎಂಬುದನ್ನು ನಾನು ತಿಳಿದುಕೊಂಡಿಲ್ಲ. ಆ ರೀತಿ ತಿಳಿದುಕೊಳ್ಳಲು ನನಗೆ ತೊಂದರೆ ಇರಲಿಲ್ಲ. ದಾವಾ ಆಸ್ತಿಗಳಲ್ಲದೇ ಬೇರೆ ಯಾವುದಾದರೂ ಆಸ್ತಿಗಳನ್ನು ಭೋಗ್ಯ ಮಾಡಿದ್ದಾರೆಯೇ ಎಂಬುದು ನನಗೆ ಗೊತ್ತಿಲ್ಲ ಬೇರೆ

ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ. ಬೇರೆ ಆಸ್ತಿಗಳನ್ನು ಮಾರಾಟ ಮಾಡಿರುವ ಬಗ್ಗೆ ವಾದ ಪತ್ರದಲ್ಲಿ ತಿಳಿಸಲು ತೊಂದರೆ ಇರಲಿಲ್ಲ. ದಾವಾ ಆಸ್ತಿಗಳನ್ನು 1990 ರಿಂದ ಇದುವರೆಗೂ ಭೋಗ್ಯ ಮಾಡಿದ್ದರೇ ಎಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸಿಲ್ಲ.

ವಿಭಾಗ ಪತ್ರ ಕನ್ನಡದಲ್ಲಿ ಆಗಿರಬಹುದು ಆದರೆ ಅದನ್ನು ಓದಲು ನನಗೆ ಕೊಟ್ಟಿರುವುದಿಲ್ಲ. ಭೋಗ್ಯ ತಿರುವಳಿ ಪತ್ರ ಮಾಡಿಸಿಕೊಳ್ಳುವುದಾಗಿ ಹೇಳಿ ವಿಭಾಗ ಪತ್ರ ನೊಂದಣಿ ಮಾಡಿಸಿಕೊಂಡಿರುತ್ತಾರೆ ಎಂದು ಪ್ರತಿವಾದಿಗಳ ವಿರುದ್ಧ ಕಾನೂನು ಕ್ರಮ ಕೈಗೊಂಡಿಲ್ಲ. ನಿ.ಪಿ-2 ರಲ್ಲಿ ಗುರುತಿಸಿರುವ ವಿಭಾಗ ಪತ್ರವನ್ನು ನಿವೃತ್ತ ಸಬ್ ರಿಜಿಸ್ಟ್ರಾರ್ ಮನೆಗೆ ನಾನು, ನನ್ನ ಯಜಮಾನರು ಮತ್ತು 1 ನೇ ಪ್ರತಿವಾದಿಗಳೆಲ್ಲರೂ ಹೋಗಿ ನಮ್ಮ ಸಮಕ್ಷಮ ಬರೆದಿದ್ದಾರೆ ಎಂದರೆ ಸುಳ್ಳು. 6 ನೇ ಪ್ರತಿವಾದಿ ನನ್ನನ್ನು ಕುರಿತು ಹಣ ಕೊಡುತ್ತಾರೆ ನೀನು ಮತ್ತು ನಿನ್ನ ಯಜಮಾನರು ಹೋಗಿ ವಿಭಾಗ ಪತ್ರ ಮಾಡಿಕೊಳ್ಳಿ ಎಂದು ಹೇಳಿದ್ದರು ಎಂಬುದು ಸುಳ್ಳು. ಅದೇ ಕಾರಣಕ್ಕಾಗಿ ದಿನಾಂಕ 28.12.2014 ರಂದು ನಾನು ಮತ್ತು ನನ್ನ ಯಜಮಾನರು ಖುದ್ದಾಗಿ ಬಂದು ವಿಭಾಗ ಪತ್ರ ಮಾಡಿಕೊಟ್ಟಿದ್ದೇವೆ ಎಂದರೆ ಸುಳ್ಳು. ವಿಭಾಗ ಪತ್ರದ ಪ್ರಕಾರ ನನಗೆ ಮತ್ತು ಪ್ರತಿವಾದಿ 4 ರಿಂದ 6 ರವರಿಗೆ ತಲಾ ಮೂರು ಲಕ್ಷ ರೂಪಾಯಿ ಕೊಟ್ಟಿದ್ದಾರೆ ಎಂದರೆ ಸುಳ್ಳು. ಈ ಕೇಸು ಹಾಕಿದ ನಂತರ ವಿಭಾಗ ಪತ್ರದಲ್ಲಿರುವ ವಿಷಯಗಳನ್ನು ನಮ್ಮ ವಕೀಲರು ಓದಿ ತಿಳಿಸಿದ್ದಾರೆ. ವಿಭಾಗ ಪತ್ರದ ಪ್ರಕಾರ ನನಗೆ ರಕ್ತ ಸಂಬಂಧ ಹೊರತುಪಡಿಸಿ ಬೇರೆ ಯಾವುದೇ ಹಕ್ಕು ಇರುವುದಿಲ್ಲ ಎಂದು ಬರೆದಿದ್ದಾರೆ ಎಂದರೆ ಸುಳ್ಳು. ದಿನಾಂಕ 01.01.2015 ರಂದು ನಾನು ಮತ್ತು ಪ್ರತಿವಾದಿಗಳೆಲ್ಲರೂ ಉಪನೊಂದಣಾಧಿಕಾರಿ ಕಚೇರಿಗೆ ಹೋಗಿ ವಿಭಾಗ ಪತ್ರ ನೊಂದಣಿ ಮಾಡಿಕೊಟ್ಟಿದ್ದೇವೆ ಎಂದರೆ ಸುಳ್ಳು. ಪ್ರತಿವಾದಿ 1 ಮತ್ತು 3 ರವರು ಸಾಕ್ಷಿಗಳ ಸಮಕ್ಷಮ ನಮಗೆ ಹಣ ಕೊಟ್ಟಿದ್ದಾರೆ ಎಂದರೆ ಸುಳ್ಳು.

**ಮುಂದುವರಿದ ಪಾಟೀ ಸವಾಲು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

PW-01

ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.
ಪಿರಿಯಾಪಟ್ಟಣ